ಉದಯವಾಣಿ
ಜನಮನದ ಜೀವನಾಡಿ
Regd.No.UDP/1259/2018-20 | udayavani.com | UDAYAVANI – KANNADA DAILY – MANIPAL

ಉದಯವಾಣಿ

## » ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಜನ್ಮ ದಿನಾಚರಣೆ

# 'ವಿಶ್ವಮಾನವ ತತ್ತ್ವ ಸಾರಿದ ಮಹಾನ್ ಗುರು'



ಪುತ್ತೂರು: ಬ್ರಹ್ಮಶ್ರೀ ಗುರುನಾರಾಯಣ ಸ್ವಾಮಿಗಳ 164ನೇ ಜಯಂತಿ ಕಾರ್ಯಕ್ರಮದಲ್ಲಿ ಬಿಲ್ಲವ ಸಾಧಕರನ್ನು ಸಮ್ಮಾನಿಸಲಾಯಿತು.

**ಪುತ್ತೂರು** ಆ. 27: ರಕ್ತಕ್ಕೆ ನೀರಿಗೆ, ಗಾಳಿಗೆ ಸಂಬಂಧಪಟ್ಟಂತೆ ಇಲ್ಲದ ಭೇದ ಮನುಷ್ಯ ಜೀವನಕ್ಕೂ ಬೇಕಾಗಿಲ್ಲ ಎನ್ನುವ ಮೂಲಕ ಕ್ರಾಂತಿಕಾರಕ ಹೋರಾಟದಿಂದ ವಿಶ್ವಮಾನವ ತತ್ತ್ವವನ್ನು ಸಾರಿದ ಮಹಾನ್ ಗುರು ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿಗಳು ಎಂದು ಉಜಿರೆ ಎಸ್‌ಡಿಎಂ ಕಾಲೇಜಿನ ಉಪನ್ಯಾಸ ಸ್ವಿತೇಶ್ ಬಾರ್ಯ ಹೇಳಿದರು.

ಬ್ರಹ್ಮಶ್ರೀ ನಾರಾಯಣ ಗುರು ಸ್ವಾಮಿ ಬಿಲ್ಲವ ಸಂಘ ಪುತ್ತೂರು, ಗುರು ಸ್ವಾಮಿ ಮಂದಿರದ ಸಹಯೋಗದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮೀಜಿ ಯವರ 164ನೇ ಜನ್ಮ ದಿನಾಚರಣೆಯಲ್ಲಿ ಅವರು ಗುರು ಸಂದೇಶ ನೀಡಿದರು.

ಒಂದೇ ಜಾತಿ, ಒಂದೇ ಮತ, ಒಂದೇ ದೇವರು ಎನ್ನುವ ಮಹಾನ್ ಸಂದೇಶವನ್ನು ಸಮಾಜಕ್ಕೆ ನೀಡಿದ ನಾರಾಯಣ ಗುರುಗಳು, ವಿದ್ಯೆಯಿಂದ ಸ್ವತಂತ್ರರಾಗಿ ಎನ್ನುವ ಮೂಲಕ ಇಡೀ ಕೇರಳದಲ್ಲಿ ಪೂರ್ಣ ಸಾಕ್ಷರತೆಗೂ ಪ್ರೇರಣೆ ನೀಡಿದವರು, ಸಂಘಟನೆಯಿಂದ ಬಲಯುತರಾಗಬೇಕು ಎನ್ನುವ ಗುರುಗಳ ಮಾರ್ಗದರ್ಶನವನ್ನು ನಾವು ಪಾಲಿಸಬೇಕು. ನಾವು ಮಾತ್ರ ಮುನ್ನಡೆಯುತ್ತೇವೆ ಎನ್ನುವುದನ್ನು ಬಿಟ್ಟು ಇತರರನ್ನೂ ಆ ಹಾದಿಯಲ್ಲಿ ಮುನ್ನಡೆಸುವ ಮೂಲಕ ಜೀವನದ ಸಾರ್ಥಕತೆಯನ್ನು ಕಾಣಬೇಕು ಎಂದರು.

### ಪ್ರತಿಭಾ ಪುರಸ್ಕಾರ, ಸಮ್ಮಾನ

ರಾಜ್ಯ, ರಾಷ್ಟ್ರಮಟ್ಟದ ಯುವ ಸಾಧಕರಾದ ಅಪೂರ್ವ ಕೆ., ಗೌತಮ್ ಎಸ್., ಮನೀಶ್ ಪಟ್ಲ, ಶ್ರಾವ್ಯಾ, ಸಾಕ್ಷಾತ್ ಕೃಷ್ಣ, ಭವಿತ್ ಕುಮಾರ್, ಎಂ.ಎಸ್. ಚೈತನ್ಯಾ, ಕೀರ್ತಿರಾಜ್ ಪೂಜಾರಿ, ರಿತೇಶ್ ಆರ್. ಸುವರ್ಣ, ರಚನಾ ಎಸ್., ಸಾಕ್ಷಿ ಕೃಷ್ಣ ಅವರನ್ನು ಸಮ್ಮಾನಿಸಲಾಯಿತು. ಸಮಾಜದ ಕೃಷಿ ಸಾಧಕ ಮನಮೋಹನ್, ಪಿಎಚ್‌ಡಿ ಪಡೆದ ಡಾ| ಭಾರತಿ, 50 ಬಾರಿ ರಕ್ತದಾನ ಮಾಡಿದ ಬಿ.ಟಿ. ಮಹೇಶ್ಚಂದ್ರ ಸಾಲ್ಯಾನ್, ಕಬಡ್ಡಿ ಕ್ರೀಡಾ ಪ್ರತಿಭೆ ಸೌಮ್ಯಾ ಅವರನ್ನು ವಿಶೇಷವಾಗಿ ಸಮ್ಮಾನಿಸಿ ಗೌರವಿಸಲಾಯಿತು.

### 'ಶೋಷಿತರಿಗೆ ನ್ಯಾಯ ಒದಗಿಸಲು ಅವಿರತ ಶ್ರಮ'

**ಸುಳ್ಯ** ಆ. 27: ಜಾತಿ ಪದ್ಧತಿ, ಅಸ್ಪೃಶ್ಯತೆ, ಶೋಷಣೆ ವಿರುದ್ಧ ಹೋರಾಟ ನಡೆಸಿ ನೊಂದವರಿಗೆ ನ್ಯಾಯ ಒದಗಿಸಲು ಅವಿರತ ಶ್ರಮಿಸಿದ ಬ್ರಹ್ಮಶ್ರೀ ನಾರಾಯಣ ಗುರು ಅವರು ನಿಜವಾದ ಆದರ್ಶ ಪುರುಷ ಎಂದು ತಾ.ಪಂ. ಅಧ್ಯಕ್ಷ ಚನಿಯ ಕಲ್ತಡ್ಕ ಹೇಳಿದರು.

ತಾಲೂಕು ಆಡಳಿತ ಮತ್ತು ಬ್ರಹ್ಮಶ್ರೀ ನಾರಾಯಣ ಗುರು ಸ್ವಾಮಿ ಬಿಲ್ಲವ ಸಂಘ ಇದರ ಜಂಟಿ ಆಶ್ರಯದಲ್ಲಿ ತಾ.ಪಂ.ಸಭಾಂಗಣದಲ್ಲಿ ನಡೆದ ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಆಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ತುಳಿತಕ್ಕೆ ಒಳಗಾದ ಸಮುದಾಯ ವನ್ನು ಮೇಲೆತ್ತಿ ಅವರಿಗೂ ಬದುಕುವ ಹಕ್ಕು ಇದೆ ಎಂದು ಪ್ರತಿಪಾದಿಸಿದ ನಾರಾಯಣ ಗುರುಗಳ ಸ್ಮರಣೆ ನಿರಂತರ ಆಗಿರಬೇಕು. ಅವರ ಆಶಯಗಳು ಎಲ್ಲೆಡೆ ಪಸರಿಸಬೇಕು ಎಂದರು.

ನ.ಪಂ. ಅಧ್ಯಕ್ಷೆ ಶೀಲಾವತಿ ಮಾಧವ, ಬ್ರಹ್ಮಶ್ರೀ ನಾರಾಯಣ ಗುರು ಸ್ವಾಮಿ ಬಿಲ್ಲವ ಸಂಘ ತಾಲೂಕು ಘಟಕದ ಅಧ್ಯಕ್ಷ ಎನ್.ಎಸ್ .ಡಿ. ವಿಟ್ಠಲದಾಸ್, ಬಿಲ್ಲವ ಮಹಿಳಾ ಘಟಕದ ಅಧ್ಯಕ್ಷೆ ಶಶಿಕಲಾ ನೀರಬಿದಿರೆ ಉಪಸ್ಥಿತರಿದ್ದರು. ಉಪ ತಹಶೀಲ್ದಾರ್ ಚಂದ್ರಕಾಂತ್ ಸ್ವಾಗತಿಸಿದರು.

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ | ಬೆಂಗಳೂರು | ಹುಬ್ಬಳ್ಳಿ | ಕಲಬುರಗಿ | ದಾವಣಗೆರೆ | ಮುಂಬಯಿ
Regd.No.UDP/1259/2018-20 | udayavani.com | UDAYAVANI – KANNADA DAILY – MANIPAL | ಮಣಿಪಾಲ, ಮಂಗಳವಾರ, ಆಗಸ್ಟ್ 28, 2018 | ಬೆಲೆ ₹ 5-00 ವಿದೇಶ ಬೆಲೆ ₹ 6-00 | ಪುಟಗಳು 12+4



udayavani.com | ಜನಮನದ ಜೀವನಾಡಿ
ಉದಯವಾಣಿ

» ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಅವರ 164ನೇ ಜನ್ಮ ದಿನಾಚರಣೆ

# ‘ವಿಶ್ವಮಾನವ ತತ್ತ್ವ ಸಾರಿದ ನಾರಾಯಣ ಗುರುಗಳು’



ಪುತ್ತೂರು: ಬ್ರಹ್ಮಶ್ರೀ ಗುರುನಾರಾಯಣ ಸ್ವಾಮಿಗಳ 164ನೇ ಜಯಂತಿ ಕಾರ್ಯಕ್ರಮದಲ್ಲಿ ಬಿಲ್ಲವ ಸಮಾಜದ ಸಾಧಕರನ್ನು ಸಮ್ಮಾನಿಸಲಾಯಿತು.

**ಪುತ್ತೂರು** ಆ. 27: ರಕ್ತಕ್ಕೆ, ನೀರಿಗೆ, ನಾಳಿಗೆ ಸಂಬಂಧಪಟ್ಟಂತೆ ಇಲ್ಲದ ಭೇದ ಮನುಷ್ಯ ಜೀವನಕ್ಕೂ ಬೇಕಾಗಿಲ್ಲ ಎನ್ನುವ ಮೂಲಕ ಕ್ರಾಂತಿಕಾರಕ ಹೋರಾಟದಿಂದ ವಿಶ್ವಮಾನವ ತತ್ತ್ವವನ್ನು ಸಾರಿದ ಮಹಾನ್ ಗುರು ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿಗಳು ಎಂದು ಉಜಿರೆ ಎಸ್‌ಡಿಎಂ ಕಾಲೇಜಿನ ಉಪನ್ಯಾಸಕ ಸ್ವತೇಶ್ ಬಾಯರ್ ಹೇಳಿದರು.

ಬ್ರಹ್ಮಶ್ರೀ ನಾರಾಯಣ ಗುರು ಸ್ವಾಮಿ ಬಿಲ್ಲವ ಸಂಘ ಪುತ್ತೂರು, ಗುರು ಸ್ವಾಮಿ ಮಂದಿರದ ಸಹಯೋಗದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮೀಜಿ ಯವರ 164ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಗುರು ಸಂದೇಶ ನೀಡಿದರು.

ಒಂದೇ ಜಾತಿ, ಒಂದೇ ಮತ, ಒಂದೇ ದೇವರು ಎನ್ನುವ ಮಹಾನ್ ಸಂದೇಶವನ್ನು ಸಮಾಜಕ್ಕೆ ನೀಡಿದ ನಾರಾಯಣ ಗುರುಗಳು, ವಿದ್ಯೆಯಿಂದ ಸ್ವತಂತ್ರರಾಗಿ ಎನ್ನುವ ಮೂಲಕ ಇಡೀ ಕೇರಳದಲ್ಲಿ ಪೂರ್ಣ ಸಾಕ್ಷರತೆಗೂ ಪ್ರೇರಣೆ ನೀಡಿದವರು, ಸಂಘಟನೆಯಿಂದ ಬಲಯುತರಾಗಬೇಕು ಎನ್ನುವ ಗುರುಗಳ ಮಾರ್ಗದರ್ಶನವನ್ನು ನಾವು ಪಾಲಿಸಬೇಕು. ನಾವು ಮಾತ್ರ ಮುನ್ನಡೆಯುತ್ತೇವೆ ಎನ್ನುವುದನ್ನು ಬಿಟ್ಟು ಇತರರನ್ನೂ ಆ ಹಾದಿಯಲ್ಲಿ ಮುನ್ನಡೆಸುವ ಮೂಲಕ ಜೀವನದ ಸಾರ್ಥಕತೆಯನ್ನು ಕಾಣಬೇಕು ಎಂದರು.

ಬೆಳ್ತಂಗಡಿ ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಂಘದ ಅಧ್ಯಕ್ಷ ಸೋಮನಾಥ ಬಂಗೇರ ವರ್ಪಾಳೆ ಮಾತನಾಡಿ, ಸಮಾಜಕ್ಕೆ ನೆರವಾಗುವುದು ಸಂಘಟನೆಯ ಪ್ರಮುಖ ಉದ್ದೇಶ. ಎಲ್ಲರೂ ಸಮಾಜದಲ್ಲಿ ಗುರುತಿಸುವಂತಾಗಲು ಪ್ರೇರಣೆಗಾಗಿ ಸಮ್ಮಾನಿಸುವುದು, ಎಲ್ಲರನ್ನೂ ಗೌರವಿಸುವ ಮೂಲಕ ಪುತ್ತೂರು ಬಿಲ್ಲವ ಸಂಘ ಮಾದರಿಯಾಗಿದೆ ಎಂದರು.

➲2

## ಪ್ರತಿಭಾ ಪುರಸ್ಕಾರ, ಸಮ್ಮಾನ

ರಾಜ್ಯ, ರಾಷ್ಟ್ರಮಟ್ಟದ ಯುವ ಸಾಧಕರಾದ ಅಪೂರ್ವ ಕೆ., ಗೌತಮ್ ಎಸ್., ಮನೀಶ್ ಪಟ್ಟ, ಶ್ರಾವ್ಯಾ, ಸಾತ್ವಿಕ್ ಕೃಷ್ಣ, ಭವಿತ್ ಕುಮಾರ್, ಎಂ.ಎಸ್. ಚೈತನ್ಯಾ, ಕೀರ್ತಿರಾಜ್ ಪೂಜಾರಿ, ರಿತೇಶ್ ಆರ್. ಸುವರ್ಣ, ರಚನಾ ಎಸ್., ಸಾಕ್ಷಿ ಕೃಷ್ಣ ಅವರನ್ನು ಸಮ್ಮಾನಿಸಲಾಯಿತು. ಸಮಾಜದ ಕೃಷಿ ಸಾಧಕ ಮನಮೋಹನ್, ಪಿಎಚ್‌ಡಿ ಪಡೆದ ಡಾ| ಭಾರತಿ, 50 ಬಾರಿ ರಕ್ತದಾನ ಮಾಡಿದ ಬಿ.ಟಿ. ಮಹೇಶ್ಚಂದ್ರ ಸಾಲ್ಯಾನ್, ಕುಬ್ಜ ಕ್ರೀಡಾ ಪ್ರತಿಭೆ ಸೌಮ್ಯಾ ಅವರನ್ನು ವಿಶೇಷವಾಗಿ ಸಮ್ಮಾನಿಸಿ ಗೌರವಿಸಲಾಯಿತು.

# ‘ಶೋಷಿತರಿಗೆ ನ್ಯಾಯ ಒದಗಿಸಲು ಅವಿರತ ಶ್ರಮ’

ಅಗ್ರವಾರ್ತೆ
ಗುರು - ಗೌರವ

**ಸುಳ್ಯ** ಆ. 27: ಜಾತಿ ಪದ್ಧತಿ, ಅಸ್ಪೃಶ್ಯತೆ, ಶೋಷಣೆ ವಿರುದ್ಧ ಹೋರಾಟ ನಡೆಸಿ, ನೊಂದವರಿಗೆ ನ್ಯಾಯ ಒದಗಿಸಲು ಅವಿರತ ಶ್ರಮಿಸಿದ ಬ್ರಹ್ಮಶ್ರೀ ನಾರಾಯಣ ಗುರು ಅವರು ನಿಜವಾದ ಆದರ್ಶ ಪುರುಷ ಎಂದು ತಾ.ಪಂ. ಅಧ್ಯಕ್ಷೆ ಚನಿಯ ಕಲ್ತಡ್ಕ ಹೇಳಿದರು.

ತಾಲೂಕು ಆಡಳಿತ ಮತ್ತು ಬ್ರಹ್ಮಶ್ರೀ ನಾರಾಯಣ ಗುರು ಸ್ವಾಮಿ ಬಿಲ್ಲವ ಸಂಘ ಇದರ ಜಂಟಿ ಆಶ್ರಯದಲ್ಲಿ ತಾ.ಪಂ.ಸಭಾಂಗಣದಲ್ಲಿ ನಡೆದ ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಆಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ತುಳಿತಕ್ಕೆ ಒಳಗಾದ ಸಮುದಾಯವನ್ನು ಮೇಲೆತ್ತಿ ಅವರಿಗೂ ಬದುಕುವ ಹಕ್ಕು ಇದೆ ಎಂದು ಪ್ರತಿಪಾದಿಸಿದ ನಾರಾಯಣ ಗುರುಗಳ ಸ್ಮರಣೆ ನಿರಂತರ ಆಗಬೇಕು. ಅವರ ಆಶಯಗಳು ಎಲ್ಲೆಡೆ ಪಸರಿಸಬೇಕು ಎಂದರು.

ನ.ಪಂ. ಅಧ್ಯಕ್ಷೆ ಶೀಲಾವತಿ ಮಾಧವ, ಬ್ರಹ್ಮಶ್ರೀ ನಾರಾಯಣ ಗುರು ಸ್ವಾಮಿ ಬಿಲ್ಲವ ಸಂಘ ತಾಲೂಕು ಘಟಕದ ಅಧ್ಯಕ್ಷ ಎನ್. ಎಸ್.ಡಿ. ವಿಟ್ಠಲದಾಸ್, ಬಿಲ್ಲವ ಮಹಿಳಾ ಘಟಕದ ಅಧ್ಯಕ್ಷೆ ಶಶಿಕಲಾ ನೀರಬಿದಿರೆ ಉಪಸ್ಥಿತರಿದ್ದರು. ಉಪ ತಹಶೀಲ್ದಾರ್ ಚಂದ್ರಕಾಂತ್ ಸ್ವಾಗತಿಸಿ, ಯುವವಾಹಿನಿ ಘಟಕದ ಅಧ್ಯಕ್ಷ ಚಂದ್ರಶೇಖರ ಪೈದಂಗೂರು ವಂದಿಸಿದರು. ಧರ್ಮಪಾಲ ಜೇಸಿ ನಿರೂಪಿಸಿದರು.

## ಆದರ್ಶ ಪಾಲಿಸೋಣ

ವಿಶೇಷ ಉಪನ್ಯಾಸ ನೀಡಿದ ಪೆರುವಾಜೆ ಸರಕಾರಿ ಪದವಿ ಕಾಲೇಜಿನ ಪ್ರಾಂಶುಪಾಲ ಚಂದ್ರಶೇಖರ ಕಾಂತಮಂಗಲ, ಕೇರಳದಲ್ಲಿ ವ್ಯಾಪಕವಾಗಿ ಹಬ್ಬಿದ್ದ ಮೇಲು-ಕೀಳು, ಜಾತಿ ವ್ಯವಸ್ಥೆಯ ವಿರುದ್ಧ ಅವಿರತ ಹೋರಾಟ ನಡೆಸಿ, ಅದರಲ್ಲಿ ಯಶಸ್ಸು ಪಡೆದಿದ್ದಾರೆ. ಅಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆ ಅನುಷ್ಠಾನಕ್ಕೆ ಅವರು ಶಕ್ತಿ ಮೀರಿ ಶ್ರಮಿಸಿದ ಪರಿಣಾಮ ಅನಿಷ್ಟ ಪದ್ಧತಿ ತೊಡೆದು, ಬಹು ದೊಡ್ಡ ಕ್ರಾಂತಿಯಾಗಿದೆ. ಬ್ರಹ್ಮಶ್ರೀ ನಾರಾಯಣ ಗುರುಗಳ ಆದರ್ಶ, ವಿಚಾರಧಾರೆ ಪಾಲನೆ ಆಗಬೇಕು. ಅದನ್ನು ನಾವು ವ್ಯಕ್ತಿಗತವಾಗಿ ರೂಢಿಸಿಕೊಳ್ಳಬೇಕು. ತತ್ವಾದರ್ಶಗಳ ಕುರಿತು ಮುಂದಿನ ಪೀಳಿಗೆಗೆ ತಿಳಿಸುವ ಕಾರ್ಯ ನಡೆಯಬೇಕು ಎಂದರು.